ಮೂ. ದಾ. ನಂ. 81/2017

ಪಿ.ಡಬ್ಲ್ಯು3

(ಇಂದು ದಿನಾಂಕ 09-08-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆ – ವಾದಿ ಪರ ಶ್ರೀ ಬಿ.ಡಿ.ಎಸ್. ವಕೀಲರಿಂದ–**

ನಾನು ಈ ಪ್ರಕರಣದಲ್ಲಿ ವಾದಿ ಪರ ಸಾಕ್ಷಿದಾರನಾಗಿದ್ದು, ನನ್ನ ಪ್ರಮಾಣಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇದೆ. ಅದನ್ನು ನಾನೇ ಹೇಳಿ ಬರೆಸಿದ್ದೇನೆ.

ನಾನು ದಾವಾಸ್ತಿಯ ಮೋಜಣಿ ಕಾಲಕ್ಕೆ ನಾನು ಸ್ಥಳದಲ್ಲಿ ಹಾಜರಿದ್ದೆನು. ಸದರಿ ವೇಳೆ ಮೋಜಣಿ ಮಾಡಿದ ಸರ್ವೆ ನಕಾಶೆಯನ್ನು ನಾನು ನೋಡಿರುತ್ತೇನೆ. ಮೋಜಣಿ ಮಾಡಿದ ಸ್ಥಳ ವಾದಿಯವರಿಗೆ ಸೇರಿದ್ದು ಎಂದು ಮೋಜಣಿ ಕಾಲಕ್ಕೆ ಭೂಮಾಪಕರು ನನಗೆ ತಿಳಿಸಿರುತ್ತಾರೆ. ಸಾಕ್ಷಿಗೆ ನಿ.ಪಿ. 10 ನ್ನು ತೋರಿಸಲಾಗಿ ಸದ್ರಿ ನಕಾಶೆಯನ್ನು ನೋಡಿ ಸದರಿ ನಕಾಶೆ ದಾವಾಸ್ತಿಗೆ ಸಂಬಂಧಪಟ್ಟದ್ದು ಎಂದು ನುಡಿದಿರುತ್ತಾರೆ. ಸಾಕ್ಷಿಯು ನಿ.ಪಿ. 10 ನ್ನು ನೋಡಿ ಸದರಿ ನಕಾಶೆಯಲ್ಲಿ ಬಣ್ಣದಿಂದ ಗುರುತಿಸಿದ ಭಾಗಕ್ಕೆ ಸಂಬಂಧಪಟ್ಟಂತೆ ದಾವೆ ನಡೆಯುತ್ತಿರುವುದಾಗಿ ಸಾಕ್ಷಿಯು ನುಡಿಯುತ್ತಾರೆ. ಸದರಿ ನಿ.ಪಿ. 10 ರಲ್ಲಿ ಬಣ್ಣದಿಂದ ಗುರುತಿಸಿದ ಜಾಗವು ವಾದಿಯವರಿಗೆ ಸೇರಿರುವುದಾಗಿ ಭೂಮಾಪಕರು ತಿಳಿಸಿರುತ್ತಾರೆ ಎಂದು ಸಾಕ್ಷಿಯು ನುಡಿದಿರುತ್ತಾರೆ.

**(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ, ಕುಮಟಾ